# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಡವಳಿಗಳು

ವಿಷಯ: ಶ್ರೀ ಎನ್. ಪ್ರಕಾಶ್, ನಾಲ್ಕನೇ ದರ್ಜೆ ನೌಕರರು, ಇವರ ಅಮಾನತ್ತನ್ನು ತೆರವುಗೊಳಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಸಮಸಂಖ್ಯೆಯ ದಿನಾಂಕ: 22-08-2022ರ ಆದೇಶ.
2) ಈ ಕಛೇರಿ ಸಮಸಂಖ್ಯೆಯ ದಿನಾಂಕ: 09-11-2022ರ ಆರೋಪಣಾ ಪಟ್ಟಿ.
3) ಸದರಿ ನೌಕರರ ಸಮಜಾಯಿಷಿ ಪತ್ರ ದಿನಾಂಕ: 09-11-2022.
4) ಈ ಕಛೇರಿ ಸಮಸಂಖ್ಯೆಯ ದಿನಾಂಕ: 17-11-2022ರ ಆದೇಶ.
5) ಸದರಿ ನೌಕರರ ಮನವಿ ಪತ್ರ ದಿನಾಂಕ: 18-11-2022 ಮತ್ತು 08-12-2022.

* * * * *

**ಪ್ರಸ್ತಾವನೆ:**

ಶ್ರೀ ಪ್ರಕಾಶ್, ನಾಲ್ಕನೇ ದರ್ಜೆ ನೌಕರರು, ಸಹಾಯಕ ಕಂದಾಯ ಅಧಿಕಾರಿ (ಪಶ್ಚಿಮ-ಮಾರುಕಟ್ಟೆ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರು ದಿನಾಂಕ: 12-08-2022 ರಂದು ಕೆ.ಆರ್. ಮಾರುಕಟ್ಟೆಯ ಹೊರಭಾಗದಲ್ಲಿ ಬೀದಿ ಬದಿ ವ್ಯಾಪಾರಿಗಳಿಂದ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಸಾರ್ವಜನಿಕರು ದೂರನ್ನು ದೂರವಾಣಿ ಮೂಲಕ ಹಾಗೂ ವಿಡಿಯೋ ಮೂಲಕ ಸಲ್ಲಿಸಿರುತ್ತಾರೆ. ಈ ರೀತಿಯಾಗಿ ಬೀದಿ ಬದಿ ವ್ಯಾಪಾರಿಗಳಿಂದ ಹಣ ವಸೂಲಿ ಮಾಡಿರುವ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ಸದರಿ ನೌಕರರನ್ನು ಉಲ್ಲೇಖ-(1)ರ ಕಛೇರಿ ಆದೇಶದಲ್ಲಿ ಅಮಾನತ್ತುಪಡಿಸಲಾಗಿರುತ್ತದೆ.

ಸದರಿ ನೌಕರರು ಎಸಗಿರುವ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ನೌಕರರ ವಿರುದ್ಧ ಉಲ್ಲೇಖ-(2)ರ ರೀತ್ಯಾ ಆರೋಪಣಾ ಪಟ್ಟಿಯನ್ನು ಹೊರಡಿಸಿದ್ದು, ಈ ಆರೋಪಣಾ ಪಟ್ಟಿಗೆ ನೌಕರರು ಉಲ್ಲೇಖ-(3)ರ ರೀತ್ಯಾ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸದರಿ ಸಮಜಾಯಿಷಿಯು ಸಮರ್ಪಕವಾಗಿಲ್ಲದೇ ಇರುವುದರಿಂದ ಸದರಿ ಪ್ರಕರಣದ ಇಲಾಖಾ ವಿಚಾರಣೆಯನ್ನು ನಡೆಸಲು ಉಲ್ಲೇಖ-(4)ರ ರೀತ್ಯಾ ಕಛೇರಿ ಆದೇಶದಲ್ಲಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

ಸದರಿ ನೌಕರರು ಉಲ್ಲೇಖ-(5)ರ ರೀತ್ಯಾ ಮನವಿ ಸಲ್ಲಿಸಿ, ಅಮಾನತ್ತನ್ನು ತೆರವುಗೊಳಿಸಿ, ಕರ್ತವ್ಯದ ಮೇಲೆ ತೆಗೆದುಕೊಳ್ಳಬೇಕೆಂದು ಕೋರಿರುವುದನ್ನು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

-: ಆದೇಶ :-

**ಸಂಖ್ಯೆ: ಬಿ12(5ಜಿ)ಪಿಆರ್/37/2022-23** **ದಿನಾಂಕ:** 21/01/2023

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎನ್. ಪ್ರಕಾಶ್, ನಾಲ್ಕನೇ ದರ್ಜೆ ನೌಕರರು, ಇವರನ್ನು ಉಲ್ಲೇಖ-(1)ರ ಕಛೇರಿ ಆದೇಶದಲ್ಲಿ ಅಮಾನತ್ತುಗೊಳಿಸಿರುವುದನ್ನು ಇಲಾಖಾ ವಿಚಾರಣೆ ಬಾಕಿ ಇರಿಸಿ, ಈ ತಕ್ಷಣದಿಂದ ಜಾರಿಗೆ ಬರುವಂತೆ ತೆರವುಗೊಳಿಸಿ, ಕರ್ತವ್ಯದ ಮೇಲೆ ತೆಗೆದುಕೊಂಡು, ಬಿಬಿಎಂಪಿ ಕಿರಿಯ ಕಾಲೇಜು, ಪಾದರಾಯನಪುರ, ಇಲ್ಲಿ ಖಾಲಿ ಇರುವ ನಾಲ್ಕನೇ ದರ್ಜೆ ನೌಕರರ ಸ್ಥಳದಲ್ಲಿ ಕಾರ್ಯನಿರ್ವಹಿಸಲು ನೇಮಿಸಿದೆ.

ಮಾನ್ಯ ಮುಖ್ಯ ಆಯುಕ್ತರವರ ಆದೇಶದಂತೆ)

21/1

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

FDC
23/01/23

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ. 21/1/23

: ಮುಖ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ವಿಶೇಷ ಆಯುಕ್ತರು (ಆಡಳಿತ/ಮಾಹಿತಿ ತಂತ್ರಜ್ಞಾನ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ನಿರ್ದೇಶಕರು (ಮಾಹಿತಿ ತಂತ್ರಜ್ಞಾನ) ರವರಿಗೆ ಕಳುಹಿಸಿದೆ.

: ಜಂಟಿ ಆಯುಕ್ತರು (ಪಶ್ಚಿಮ) ರವರಿಗೆ ಕಳುಹಿಸಿದೆ.

: ಪ್ರಾಂಶುಪಾಲರು, ಬಿಬಿಎಂಪಿ ಕಿರಿಯ ಕಾಲೇಜು, ಪಾದರಾಯನಪುರ ರವರಿಗೆ ಕಳುಹಿಸಿದೆ.

: ಸಹಾಯಕ ಕಂದಾಯ ಅಧಿಕಾರಿ (ಪಶ್ಚಿಮ-ಮಾರುಕಟ್ಟೆ) ರವರಿಗೆ ಕಳುಹಿಸಿದೆ.

: ಮುಲೆಅ/ಮುಲೆಪ/ಉ.ನಿ (ಹಣಕಾಸು-ಕೇಂದ್ರ / ಪಶ್ಚಿಮ) ರವರಿಗೆ ಕಳುಹಿಸಿದೆ.

: ಸಂಬಂಧಪಟ್ಟ ನೌಕರರಿಗೆ / ಕಛೇರಿ ಪ್ರತಿ

ಉಪ ಮುಖ್ಯ ಮಾಹಿತಿ ಅಧಿಕಾರಿ (ಮಾಹಿತಿ ತಂತ್ರಜ್ಞಾನ) ರವರ ಕಛೇರಿ
ಸಂಖ್ಯೆ: ..... 1125
ದಿನಾಂಕ: 25/1/23

ಮಾಹಿತಿ ತಂತ್ರಜ್ಞಾನ ಇಲಾಖೆ Dir(IT)/AL/146/22-23 23-01-2023 ಬೆಂಗಳೂರು

24/1

FDC
25/01/23

Srinidhi 25/1/23